# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು, 2012ರಡಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ನಡೆಸುವ ಸಲುವಾಗಿ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯಾನಿಕ್ಸ್) ಪ್ರಸ್ತಾಪಿಸಿದ ದರವನ್ನು ಅನುಮೋದಿಸುವ ಬಗ್ಗೆ.

**ಓದಲಾಗಿದೆ:**

1. ದಿನಾಂಕ: 28.03.2014ರ ಸರ್ಕಾರಿ ಆದೇಶ ಸಂ: ಸಿಆಸುಇ 34 ಇಆಇ 2012.
2. ವ್ಯವಸ್ಥಾಪಕ ನಿರ್ದೇಶಕರು, ಕಿಯಾನಿಕ್ಸ್, ಇವರ ದಿನಾಂಕ: 07.11.2014ರ ಪತ್ರ ಸಂ: KSEDC/MD /e-Gov/Online Exam/2014-15.
3. ಸರ್ಕಾರದ ದಿನಾಂಕ: 11.11.2014ರ ಪತ್ರ ಸಂ: ಸಿಆಸುಇ 104 ಇಆಇ 2014.
4. ವ್ಯವಸ್ಥಾಪಕ ನಿರ್ದೇಶಕರು, ಕಿಯಾನಿಕ್ಸ್, ಇವರ ದಿನಾಂಕ: 13.11.2014ರ ಪತ್ರ ಸಂ: KSEDC/MD /e-Gov/Online Exam/2014-15.

**ಪ್ರಸ್ತಾವನೆ:**

1. ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು, 2012ರಡಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ನಡೆಸುವ ಕಾರ್ಯವನ್ನು, ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯಾನಿಕ್ಸ್)ಗೆ ವಹಿಸಲು ಮೇಲೆ (1)ರಲ್ಲಿ ಓದಲಾದ ದಿನಾಂಕ: 28.03.2014ರ ಆದೇಶದನ್ವಯ ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ. ಅದರಂತೆ, ಕಿಯಾನಿಕ್ಸ್ ಸಂಸ್ಥೆಯು ಅದರ ಟೆಂಡರ್ ಸಂಖ್ಯೆ: KSEDC/IT EDU/001/2014-15 ರನ್ವಯ "On-line Test and Assessment Operator" ರ ಆಯ್ಕೆಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿತು. ಈ ರೀತಿ ಕೈಗೊಂಡ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ನಂತರ ವ್ಯವಸ್ಥಾಪಕ ನಿರ್ದೇಶಕರು, ಕಿಯಾನಿಕ್ಸ್ ರವರ, ಮೇಲೆ (2)ರಲ್ಲಿ ಓದಲಾದ ದಿನಾಂಕ: 07.11.2014ರ ಪತ್ರದನ್ವಯ ಪರೀಕ್ಷೆಗೆ ಒಳಗಾಗುವ ಪ್ರತಿ ಸರ್ಕಾರಿ ನೌಕರರಿಗಾಗಿ ಒಟ್ಟಾರೆ (ತಲಾ) ₹295ರ ಈ ಕೆಳಗೆ ನಮೂದಿಸಿದ ದರಕ್ಕೆ ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ:-

| | | |
|---|---|---|
| 1. | ಯಶಸ್ವಿ ಬಿಡ್‌ದಾರ ಸಂಸ್ಥೆಯಾದ ಮೆ॥ ಸಿಫಿ ಟೆಕ್ನಾಲಜೀಸ್ ಲಿಮಿಟೆಡ್ (M/s Sify Technologies Limited) ಪ್ರಸ್ತಾಪಿಸಿದ, ಸಂಧಾನ ದರ (negotiated rate) | ₹270 (₹240ರ ದರ +12.36 ಸೇವಾ ಕರ, ಒಟ್ಟು ₹270) |
| 2. | ಪರೀಕ್ಷೆಗೆ ಒಳಗಾಗುವ ಪ್ರತಿ ಸರ್ಕಾರಿ ನೌಕರರಿಗಾಗಿ ಕಿಯಾನಿಕ್ಸ್ ರ ಸೇವಾ ಶುಲ್ಕ(service charge) | ₹25 |
| | ಒಟ್ಟು | ₹295 (ಇನ್ನೂರ ತೊಂಭತ್ತೈದು ₹ಗಳು ಮಾತ್ರ) |

ಕೃಷಿ ಆಯುಕ್ತರ ಕಛೇರಿ 2310 11 DEC 2014

2. ಮೇಲಿನ ಪಟ್ಟಿಯ ಕ್ರಮ ಸಂಖ್ಯೆ:2ರಲ್ಲಿನ ಸೇವಾ ಶುಲ್ಕಕ್ಕೆ(service charge) ಸಂಬಂಧಿಸಿದಂತೆ ಸಮರ್ಥನೀಯ ಕಾರಣಗಳು ಇದ್ದಲ್ಲಿ ಅದನ್ನು ತಿಳಿಸುವಂತೆ, ವ್ಯವಸ್ಥಾಪಕ ನಿರ್ದೇಶಕರು, ಕಿಯಾನಿಕ್ಸ್ ಇವರಿಗೆ ಉದ್ದೇಶಿಸಿದ, ಮೇಲೆ (3)ರಲ್ಲಿ ಓದಲಾದ ಸರ್ಕಾರದ ದಿನಾಂಕ: 11.11.2014ರ ಪತ್ರದನ್ವಯ ಕೋರಲಾಯಿತು. ಅದಕ್ಕೆ ಪ್ರತಿಕ್ರಿಯಿಸುತ್ತಾ, ಮೇಲೆ (4)ರಲ್ಲಿ ಓದಲಾದ ದಿನಾಂಕ: 13.11.2014ರ ಅವರ ಪತ್ರದನ್ವಯ ವ್ಯವಸ್ಥಾಪಕ ನಿರ್ದೇಶಕರವರು ಈ ಕೆಳಗೆ ಉದ್ಧರಿಸಿದಂತೆ ಸಮರ್ಥನೆ ನೀಡಿರುತ್ತಾರೆ:-

Computer ADD (Admn) 12/12

"KEONICS has submitted the proposal for online examination project along with detailed tendering process and the prices received from the successful bidder. KEONICS has following role and responsibility in this project and therefore

15/12.

KEONICS proposes rto establish a Monitoring Cell which shall be as follows:

1. Exclusive team consisting of 4 to 5 members headed by an officer has to be formed to supervise, monitor and control the entire system and procedure for conducting online examination.
2. The team has to periodically visit the examination centers and ensure that appropriate infrastructure is set up at each location.
3. A monitoring center at our following address will be set up to have an online interaction with all the district head quarters.
   KEONICS Training Center
   #29/1, Race Course Road, Bangalore-560 001.
4. Periodical review of the question banks and updating the questions in consultation with Center for e-Governance.
5. To co-ordinate with the Center for e-Governance and the implementing agency for online examination for all related activities.

In view of the facts explained above, KEONICS would charge a nominal ₹25 per candidate service charge over and above the price received by the successful bidder."

3. ಈ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 104 ಇಆಇ 2014, ಬೆಂಗಳೂರು ದಿನಾಂಕ: 2ನೇ ಡಿಸೆಂಬರ್ 2014**

4. ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ, ಕರ್ನಾಟಕ ಸಿವಿಲ್ ಸೇವಾ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು, 2012ರಡಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ನಡೆಸುವ ಸಲುವಾಗಿ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯಾನಿಕ್ಸ್) ಪ್ರಸ್ತಾಪಿಸಿದ, ಪರೀಕ್ಷೆಗೆ ಒಳಗಾಗುವ ಪ್ರತಿ ಸರ್ಕಾರಿ ನೌಕರರಿಗಾಗಿ ಒಟ್ಟಾರೆ (ತಲಾ) ₹295ರ ಈ ಕೆಳಗೆ ನಮೂದಿಸಿದ ದರಕ್ಕೆ ಸರ್ಕಾರದ ಅನುಮೋದನೆಯನ್ನು ಈ ಮೂಲಕ ನೀಡಲಾಗಿದೆ:-

| | | |
|---|---|---|
| 1. | ಯಶಸ್ವಿ ಬಿಡ್‌ದಾರ ಸಂಸ್ಥೆಯಾದ ಮೆ॥ ಸಿಫಿ ಟೆಕ್ನಾಲಜೀಸ್ ಲಿಮಿಟೆಡ್ (M/s Sify Technologies Limited) ಪ್ರಸ್ತಾಪಿಸಿದ, ಸಂಧಾನ ದರ (negotiated rate) | ₹270 (₹240ರ ದರ + 12.36 ಸೇವಾ ಕರ, ಒಟ್ಟು ₹270) |
| 2. | ಪರೀಕ್ಷೆಗೆ ಒಳಗಾಗುವ ಪ್ರತಿ ಸರ್ಕಾರಿ ನೌಕರರಿಗಾಗಿ ಕಿಯಾನಿಕ್ಸ್ ರ ಸೇವಾ ಶುಲ್ಕ(service charge) | ₹25 |
| | ಒಟ್ಟು | ₹295 (ಇನ್ನೂರ ತೊಂಭತ್ತೈದು ₹ಗಳು ಮಾತ್ರ) |

5. ಮೇಲೆ (1)ರಲ್ಲಿ ಓದಲಾದ ದಿನಾಂಕ: 28.03.2014ರ ಆದೇಶದನ್ವಯ ಸರ್ಕಾರಿ ನೌಕರರಿಗಾಗಿ ಸದರಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯಾನಿಕ್ಸ್)ರ ವತಿಯಿಂದ ತ್ವರಿತವಾಗಿ ನಡೆಸತಕ್ಕದ್ದು.

6. ಈ ಉದ್ದೇಶಕ್ಕಾಗಿ ಅನುದಾನ ಬಿಡುಗಡೆಗಾಗಿ ಪ್ರಸ್ತಾವನೆಗಳನ್ನು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯಾನಿಕ್ಸ್)ರ ವತಿಯಿಂದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಗೆ ಸೂಕ್ತ ಸಮಯದಲ್ಲಿ ಕಳುಹಿಸತಕ್ಕದ್ದು.

7. ಸದರಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ನಡೆಸಲು ಆಗುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "3451-00-090-2-0-059 ವಿದ್ಯುನ್ಮಾನ ಆಡಳಿತ ಯೋಜನೆ-ಇತರೆ ವೆಚ್ಚಗಳು (ಯೋಜನೆ)"ಯಡಿ ಭರಿಸತಕ್ಕದ್ದು.

8. ಆರ್ಥಿಕ ಇಲಾಖೆಯ ದಿನಾಂಕ: 01.12.2014ರ ಟಿಪ್ಪಣಿ ಸಂಖ್ಯೆ: ಆಇ 995 ವೆಚ್ಚ-12 2014ರನ್ವಯ ಆರ್ಥಿಕ ಇಲಾಖೆ ನೀಡಿದ ಸಹಮತಿಯಂತೆ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ವೀಣಾ) 3/12/2014
ಪೀಠಾಧಿಕಾರಿ-1
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ)

ರವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ- ಈ ಆದೇಶವನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 500 ಪ್ರತಿಗಳನ್ನು ಪೀಠಾಧಿಕಾರಿ-1, ಸಿಆಸುಇ(ಇ-ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಒದಗಿಸಬೇಕೆಂದು ಕೋರಿದೆ.

ಪ್ರತಿ

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರುಗಳು
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರುಗಳು
3. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ), ಆಡಿಟ್ ಭವನ, ಹೊಸ ಕಟ್ಟಡ, ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
4. ಪ್ರಧಾನ ಮಹಾಲೇಖಪಾಲರು(ಇಆರ್&ಎಸ್ಎ), ಆಡಿಟ್ ಭವನ, ಹೊಸ ಕಟ್ಟಡ, ಅಂಚೆ ಪೆಟ್ಟಿಗೆ ಸಂ: 5398, ಬೆಂಗಳೂರು-01.
5. ಪ್ರಧಾನ ಮಹಾಲೇಖಪಾಲರು (ಎ&ಇ), ಮುಖ್ಯ ಕಟ್ಟಡ, ಬೆಂಗಳೂರು-01.
6. ಮಹಾನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು-570 011
7. ಸರ್ಕಾರದ ಕಾರ್ಯದರ್ಶಿ (ವೆಚ್ಚ), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
8. ಎಲ್ಲಾ ಇಲಾಖಾ ಮುಖ್ಯಸ್ಥರುಗಳು
9. ವ್ಯವಸ್ಥಾಪಕ ನಿರ್ದೇಶಕರು, ಕಿಯಾನಿಕ್ಸ್, 2ನೇ ಮಹಡಿ, ಟಿಟಿಎಮ್‌ಸಿ "ಎ" ಬ್ಲಾಕ್, ಬಿಎಮ್‌ಟಿಸಿ, ಶಾಂತಿನಗರ, ಕೆ.ಹೆಚ್. ರಸ್ತೆ, ಬೆಂಗಳೂರು-27.
10. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಯವರುಗಳು
11. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರುಗಳು
12. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ, ಬಹುಮಹಡಿ ಕಟ್ಟಡ, ಬೆಂಗಳೂರು
13. ಸರ್ಕಾರದ ಅಪರ ಕಾರ್ಯದರ್ಶಿ, ಸಿಆಸುಇ(ಸೇವಾ ನಿಯಮಗಳು)
14. ಜಿಲ್ಲಾ ಆಡಳಿತ ಸಂಸ್ಥೆಗಳ ಎಲ್ಲಾ ಪ್ರಾಂಶುಪಾಲರು
15. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
16. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಹಾಗೂ ಸಿಆಸುಇ(ಇ-ಆಡಳಿತ)
17. ಶಾಖಾಧಿಕಾರಿ, ಆರ್ಥಿಕ ಇಲಾಖೆ (ವೆಚ್ಚ-12), ವಿಧಾನ ಸೌಧ, ಬೆಂಗಳೂರು
18. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು
19. ಸರ್ಕಾರದ ಕಾರ್ಯದರ್ಶಿ, ಸಿಆಸುಇ (ಇ-ಆಡಳಿತ), ಇವರ ಆಪ್ತ ಸಹಾಯಕರು
20. ಶಾಖಾ ರಕ್ಷಾಕ ಕಡತ/ಬಿಡಿ ಪ್ರತಿಗಳು